**ಇಂದು ದಿನಾಂಕ 27.10.2025 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

**1.** ನಾನು ಹುಟ್ಟಿದ 9 ದಿನಕ್ಕೆ ನನ್ನ ತಾಯಿ ಮೃತರಾಗಿದ್ದಾರೆ. ದಿನಾಂಕಃ10.02.1976 ರಲ್ಲಿ ನಾನು ಹುಟ್ಟಿದ್ದೇನೆ. ಆ ಕಾಲಕ್ಕೆ ನನ್ನ ತಂದೆ ಮತ್ತು ನನ್ನ ತಾತ ಒಟ್ಟಿಗೆ ಇದ್ದರು. 1977-78 ರಲ್ಲಿ ನನ್ನ ತಂದೆ, ನನ್ನ ಚಿಕ್ಕಪ್ಪ ಮತ್ತು ನನ್ನ ತಾತ ಭಾಗ ಮಾಡಿಕೊಂಡಿದ್ದಾರೆ. ದಾವಾ ಷೆಡ್ಯೂಲ್ 'ಇ' ಆಸ್ತಿಯನ್ನು 1980 ರಲ್ಲಿ ಖರೀದಿಸಿದ್ದೇವೆ. 1980 ರಲ್ಲಿ ನನಗೆ 3-3 1/2 ವರ್ಷ. 1980 ರಲ್ಲಿ ಖರೀದಿಸಿದ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ನೋಂದಣಿಯಾಗಿದ್ದು ಹಣವನ್ನು ನನ್ನ ತಂದೆ ಮಾತ್ರ ಕೊಟ್ಟಿದ್ದಾರೆ ಎಂದರೆ ನನ್ನ ತಾತ ಕೂಡ ಹಣವನ್ನು ಕೊಟ್ಟಿದ್ದಾರೆ ಎನ್ನುತ್ತಾರೆ. ನನ್ನ ತಾತ ಹಣ ಕೊಟ್ಟ ಬಗ್ಗೆ ನಾನು ತಕರಾರಿನಲ್ಲಿ ಹೇಳಿಲ್ಲ. ಆ ಬಗ್ಗೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಆ ವಿಚಾರವನ್ನು ಇದೇ ಮೊದಲ ಭಾರಿಗೆ ನಾನು ಹೇಳುತ್ತಿದ್ದೇನೆ. ಸಿಂಧು ನದಿ ಮತ್ತು ಕೃಷ್ಣ ನದಿಗೆ ಸೇರಿದ ಆಸ್ತಿಗಳನ್ನು ಸೇರಿಸಿದ್ದೇವೆ. ನಾನು ತಕರಾರು ಹಾಕಿದಾಗ ಆ ಆಸ್ತಿಗಳನ್ನು ಸೇರಿಸಿದ್ದೇನೆ. ನನ್ನ ಅಕ್ಕ ದಾವೆ ಹಾಕಿದಾಗ ಸೇರಿಸಿಲ್ಲ. ವಾದಿ ಸಿಂಧು ನದಿ ಮತ್ತು ಕೃಷ್ಣ ನದಿಗೆ ಸೇರಿದ ಆಸ್ತಿಗಳಲ್ಲಿ ಭಾಗ ಕೇಳಿಲ್ಲ. ನಾನು ಇದೇ ದಾವೆಯಲ್ಲಿ ಆ ಆಸ್ತಿಗಳಲ್ಲಿ ಭಾಗ ಕೇಳಿದ್ದೇನೆ. ಆ ಆಸ್ತಿಗಳು ನನ್ನ ತಂದೆ ಮತ್ತು ವತ್ಸಲ ರವರ ಹೆಸರಿನಲ್ಲಿದೆ. ವತ್ಸಲರವರು ಚಂದ್ರಶೇಖರ್ ರವರ ಕಡೆಯಿಂದ ರೂ.20 ಲಕ್ಷ ಸಾಲ ಮಾಡಿ ಆ ಆಸ್ತಿಗಳನ್ನು 2006 ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿ ಖರೀದಿಸುವಾಗ ನಾನು ಹಣ ಕಾಸಿನ ಸಹಾಯ ಮಾಡಿಲ್ಲ. ಆ ಆಸ್ತಿಯ ಖಾತೆ ಮತ್ತು ಪಹಣಿ ಅವರ ಹೆಸರಿನಲ್ಲಿ ಇದೆ. ಆ ಆಸ್ತಿಗೆ ಒಟ್ಟು ಕುಟುಂಬದ ಆಸ್ತಿ ಎಂದು ನಾನು ಕಂದಾಯ ಕಟ್ಟಿಲ್ಲ. ಆ ಆಸ್ತಿಯಲ್ಲಿ ನಾನು ಮತ್ತು ಬಿಂದು ಸ್ವಾಧೀನದಲ್ಲಿ ಇಲ್ಲ. ಸಂಪಾದನೆ ಇಲ್ಲದ ಕಾರಣ ಅವರು ಮನೆಯಲ್ಲಿ ಬಾಡಿಗೆಗೆ ಕೊಟ್ಟು ಬಾಡಿಗೆ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. 'ಎ' ರಿಂದ 'ಡಿ' ಷೆಡ್ಯೂಲ್ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿದ್ದವು ಎಂದರೆ ನಿಜ. ಸದರಿ ಆಸ್ತಿಗಳನ್ನು ದಾವೆ ಹಾಕುವ ಮೊದಲು ನಾನು, ನನ್ನ ತಂದೆ, ನನ್ನ ಚಿಕ್ಕಮ್ಮ ಸಹಿ ಮಾಡಿ ಮಾರಾಟ ಮಾಡಿದ್ದೇವೆ ವಾದಿ ಸಹಿ ಹಾಕಿಲ್ಲ. ದಾವೆ ಹಾಕಿದ ನಂತರ ವಾದಿ ಒಪ್ಪಿಗೆ ಪತ್ರ ಬರೆದುಕೊಟ್ಟು ಅವರಿಗೆ ಬರಬೇಕಾದ ಹಣ ಪಡೆದು ಸಹಿ ಮಾಡಿಕೊಟ್ಟಿದ್ದಾರೆ ಎಂದರೆ ನಿಜ. ಆ ಆಸ್ತಿಗಳನ್ನು ತೆಗೆದುಹಾಕಿ 6 ರಿಂದ 10 ನೇ ಪ್ರತಿವಾದಿಯರನ್ನು ರಾಜಿ ಮಾಡಿಕೊಂಡ ಕಾರಣ ದಾವೆಯಿಂದ ತೆಗೆದಿದ್ದಾರೆ ಎಂದರೆ ನಿಜ. 'ಎ' ರಿಂದ 'ಡಿ' ಆಸ್ತಿಗಳಲ್ಲಿ ಖರೀದಿದಾರರೇ ಈಗಲೂ

ಸ್ವಾಧೀನದಲ್ಲಿದ್ದಾರೆ ಎಂದರೆ ನಿಜ. ನಾನು, ನನ್ನ ತಂದೆ, ನನ್ನ ಚಿಕ್ಕಮ್ಮ ಮತ್ತು ನನ್ನ ಅಕ್ಕ 2006 ರಿಂದ ಬೇರೆ ಇದ್ದೇವೆ. ನಾನು 3 ನೇ ಪ್ರತಿವಾದಿಗೆ ತಿಂಗಳ ಜೀವನಾಂಶವನ್ನು ಕೊಡುತ್ತಿಲ್ಲ. 3 ನೇ ಪ್ರತಿವಾದಿಗೆ ಮನೆ ಬಾಡಿಗೆ ಬಿಟ್ಟು ಬೇರೆ ಆಸ್ತಿ ಅವರಿಗೆ ಇಲ್ಲ. ನಾನು 3 ನೇ ಪ್ರತಿವಾದಿಗೆ ಜಮೀನು ಖರೀದಿಸಲು ಸಹಾಯ ಮಾಡಿದ ಬಗ್ಗೆ ದಾಖಲೆ ಇಲ್ಲ. ಖರೀದಿ ಮಾಡಿದಾಗಿಂದ ಇವತ್ತಿನವರೆಗು 3 ನೇ ಪ್ರತಿವಾದಿಯೇ ಸ್ವಂತ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ನಿಜ. ನಾನು ವ್ಯವಸಾಯ ಮಾಡುವುದಿಲ್ಲ. 1 ನೇ ಪ್ರತಿವಾದಿ ವೀಳೆದೆಲೆ ಅಡಿಕೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ ಬಳೆ ವ್ಯಾಪಾರ ಮಾಡುತ್ತಿದ್ದರು. ನನ್ನ ತಂದೆ ಹಾಕಿರುವ ತಕರಾರನ್ನು ನಾನು ತಿಳಿದುಕೊಂಡಿದ್ದೇನೆ. ನನ್ನ ತಂದೆ ಲಿಖಿತ ಹೇಳಿಕೆಯಲ್ಲಿ ನಾನು ಪ್ರತ್ಯೇಕವಾಗಿ ವೀಳೆದೆಲೆ ಅಡಿಕೆ ವ್ಯಾಪಾರ ಮಾಡುತ್ತಿದ್ದೇನೆ ಎಂದು ಬರೆದು ಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ನನ್ನ ತಾಯಿ ತೀರಿಕೊಂಡ ನಂತರ ನಾವು ವ್ಯವಸಾಯ ಮಾಡುತ್ತಿದ್ದೆವು. ಎಲ್ಲಾ ಆಸ್ತಿಗಳು ವಿಭಾಗವಾಗುವ ಮೊದಲು ನನ್ನ ತಾತನ ಸುಬರ್ದಿನಲ್ಲಿ ಇದ್ದವು ಎಂದರೆ ನಿಜ. ನನ್ನನ್ನು, ನನ್ನ ತಾಯಿ ಮತ್ತು ನನ್ನ ಅಕ್ಕನನ್ನು ನನ್ನ ತಂದೆ ವ್ಯಾಪಾರ ಮಾಡಿ ನಮ್ಮನ್ನು ಸಾಕುತ್ತಿದ್ದರು ಎಂದರೆ ಸರಿಯಲ್ಲ. ಬಳೆ ವ್ಯಾಪಾರ ಮಾಡುತ್ತಿರಲಿಲ್ಲ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆಗೆ ವಾರ್ಷಿಕ ಆದಾಯ ಎಷ್ಟು ಎಂದು ಗೊತ್ತಿಲ್ಲ. ಮನೆಯ ಸಂಸಾರಕ್ಕೆ ಎಷ್ಟು ಖರ್ಚು ಮಾಡಿ ಉಳಿಸುತ್ತಿದ್ದರು ಎಂದರೆ ಬಾಡಿಗೆಯಿಂದ ಬಂದ ಹಣವನ್ನು ಖರ್ಚು ಮಾಡಿ ಸ್ವಲ್ಪ ಉಳಿಸುತ್ತಿದ್ದರು. ನನಗೆ ಮತ್ತು ನನ್ನ ಅಕ್ಕನಿಗೆ ನನ್ನ ತಂದೆ ಮದುವೆ ಮಾಡಿದ್ದಾರೆ. ನನ್ನ ತಂದೆಗೆ ಎರಡನೆ ಮದುವೆ ಮಾಡಿದ್ದು ಯಾರು ಎಂದು ಗೊತ್ತಿಲ್ಲ. ನನ್ನ ಚಿಕ್ಕಮ್ಮನ ಮಕ್ಕಳಿಗೆ ಮದುವೆಯಾಗಿದೆ. ಅವರಿಗು ಎಲ್ಲಾ ಖರ್ಚುಗಳನ್ನು ಮಾಡಿ ನನ್ನ ತಂದೆ ಮದುವೆ ಮಾಡಿದ್ದಾರೆ ಎಂದರೆ ನಿಜ. ನಮ್ಮ ಮದುವೆಯಾಗುವವತ್ತಿಗೆ ದಾವೆ ಹಾಕಿದ್ದರು. ದಾವೆ ಹೂಡುವಾಗ ನನಗೆ ಮತ್ತು ನನ್ನ ತಂದೆಗೆ ಸಂಬಂಧ ಚೆನ್ನಾಗಿ ಇರಲಿಲ್ಲ. ನನ್ನ ತಂದೆ ಮದುವೆ ಮಾಡುವಾಗ ನಾನು ಯಾವುದೇ ಹಣ ಕಾಸನ್ನು ಕೊಟ್ಟಿಲ್ಲ. ನನ್ನ ತಂದೆ ಮದುವೆ ಮಾಡಲು ಸಾಲ ಮಾಡಿದ್ದ ಕಾರಣ ಆಸ್ತಿ ಮಾರಿ ತೀರಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆ ಮಾಡುವಾಗ ನನ್ನ ತಂದೆ ಹಣವನ್ನು ಇಟ್ಟುಕೊಂಡಿದ್ದರು. ಮದುವೆಗೆ ಎಷ್ಟು ಖರ್ಚಾಗಿದೆ ಎಂದು ಗೊತ್ತಿಲ್ಲ. 'ಎ' ರಿಂದ 'ಡಿ' ಷೆಡ್ಯೂಲ್ ಆಸ್ತಿಗಳನ್ನು ಸುಮಾರು ರೂ.1 ಕೋಟಿ 5 ಲಕ್ಷಕ್ಕೆ ಮಾರಿದ್ದೇವೆ. ಆ ಹಣದಿಂದ ನನ್ನ ತಂದೆ ಎರಡು ಮನೆಗಳನ್ನು ಖರೀದಿಸಿದ್ದಾರೆ. ಮದುವೆಗೆ ಸ್ವಲ್ಪ ಖರ್ಚು ಮಾಡಿದ್ದಾರೆ. ಉಳಿದ ಹಣ ಏನು ಮಾಡಿದ್ದಾರೊ ಗೊತ್ತಿಲ್ಲ. 405 ಮತ್ತು 257 ನಂಬರ್ ಮನೆಗಳನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ. ಖರೀದಿ ಮಾಡುವಾಗ ಮಾತು-ಕತೆಗೆ ನಾನು ಹೋಗಿದ್ದೆ. ಆ ಕ್ರಯಪತ್ರಗಳಿಗೆ ನಾನು ಸಹಿ ಮಾಡಿಲ್ಲ. ನನ್ನ ತಂದೆ ಒಂದು ಮನೆಯನ್ನು ಖರೀದಿಸಿ (ಷೆಡ್ಯೂಲ್-ಇ)

ಉಳಿದ ಹಣದಿಂದ ನಮ್ಮೆಲ್ಲರ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಖರೀದಿಸಿದ ಬಗ್ಗೆ ನಾನು ದಾಖಲೆ ಹಾಜರು ಮಾಡಿಲ್ಲ.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**